# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ, ರಾ.ಹೆ. –4, ಶಿಗ್ಗಾವಿ ತಾ. ಹಾವೇರಿ ಜಿಲ್ಲೆ – 581 205

## ಪ್ರವೇಶಾತಿ ಪ್ರಕಟಣೆ

ಕ.ಜಾ.ವಿ.ವಿ./ಪ್ರ.ಅ/2020–21/377

ದಿನಾಂಕ: 23.09.2020

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು 2020–21ನೇ ಶೈಕ್ಷಣಿಕ ಸಾಲಿನಲ್ಲಿ ಕೇಂದ್ರಸ್ಥಾನದಲ್ಲಿ ಹಾಗೂ ಪ್ರಾದೇಶಿಕ ಜಾನಪದ ಅಧ್ಯಯನ ಕೇಂದ್ರಗಳಲ್ಲಿ ನಡೆಯುವ ಈ ಕೆಳಕಂಡ ಸ್ನಾತಕೋತ್ತರ ಪದವಿ /ಸರ್ಟಿಫಿಕೇಟ್/ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅ) ಜಾನಪದ ವಿಶ್ವವಿದ್ಯಾಲಯದ ಕೇಂದ್ರಸ್ಥಾನ, ಗೊಟಗೋಡಿ

| ಕ್ರಸಂ | ಕೋರ್ಸ್‌ಗಳು | ವಿಷಯ | ವಿದ್ಯಾರ್ಹತೆ |
|---|---|---|---|
| | | **ಸ್ನಾತಕೋತ್ತರ ಕೋರ್ಸ್‌ಗಳು** | |
| 1 | ಎಂ.ಎ. | ➢ ಜಾನಪದ ವಿಜ್ಞಾನ<br>➢ ಜನಪದ ಸಾಹಿತ್ಯ<br>➢ ಜನಪದ ಕಲೆ<br>➢ ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ<br>➢ ಗ್ರಾಮೀಣ ಮತ್ತು ಬುಡಕಟ್ಟು ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ<br>➢ ಕನ್ನಡ ಮತ್ತು ಜಾನಪದ<br>➢ ಇಂಗ್ಲಿಷ್ (ಜಾನಪದ ಮತ್ತು ಅನುವಾದ ಅನುಲಕ್ಷಿಸಿ)<br>➢ ಅರ್ಥಶಾಸ್ತ್ರ (ಗ್ರಾಮೀಣ)<br>➢ ಸಮಾಜಶಾಸ್ತ್ರ(ಗ್ರಾಮೀಣ) | ಯಾವುದೇ ಪದವಿ |
| 2 | ಎಂ.ಎಸ್ಸಿ | ➢ ಪಾರಂಪರಿಕ ವಿಜ್ಞಾನ ಮತ್ತು ತಂತ್ರಜ್ಞಾನ | ಬಿ.ಎಸ್ಸಿ. |
| 3 | ಎಂ.ಬಿ.ಎ. * | ➢ ಗ್ರಾಮೀಣ ಮತ್ತು ಬುಡಕಟ್ಟು ನಿರ್ವಹಣೆ<br>➢ ಪ್ರವಾಸೋದ್ಯಮ ಮತ್ತು ಪ್ರವಾಸ ನಿರ್ವಹಣೆ | ಯಾವುದೇ ಪದವಿ |
| 4 | ಎಂ.ಪಿ.ಎ | ➢ ಪ್ರದರ್ಶನ ಕಲೆ | |
| 5 | ಎಂ.ವಿ.ಎ | ➢ ದೃಶ್ಯ ಕಲೆ | ಬಿ.ವಿ.ಎ / ಬಿ.ಎಫ್.ಎ |
| 6 | ಎಂ.ಎಸ್. ಡಬ್ಲ್ಯೂ | ➢ ಸಮಾಜ ಕಾರ್ಯ (ಜನಪದ ಮತ್ತು ಬುಡಕಟ್ಟು ಅಭಿವೃದ್ಧಿ ಅನುಲಕ್ಷಿಸಿ) | ಯಾವುದೇ ಪದವಿ |
| | | **ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗಳು** | |
| 7 | ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್ | ➢ ಜನಪದ ಮಹಾಕಾವ್ಯ<br>➢ ಪಾರಂಪರಿಕ ಹೈನುಗಾರಿಕೆ<br>➢ ಪಾರಂಪರಿಕ ತೋಟಗಾರಿಕೆ | ಯಾವುದೇ ಪದವಿ |
| | | **ಡಿಪ್ಲೊಮಾ ಕೋರ್ಸ್‌ಗಳು** | |
| 8 | ಡಿಪ್ಲೊಮಾ ಕೋರ್ಸ್ | ➢ ಜಾನಪದ, ಬಯಲಾಟ (ಮೂಡಲಪಾಯ), ಯಕ್ಷಗಾನ ಬಯಲಾಟ, ಪಾರಂಪರಿಕ ಸೌಂದರ್ಯಶಾಸ್ತ್ರ, ಹಚ್ಚೆ, ಪಾರಂಪರಿಕ ಸಮರಕಲೆ, ಯೋಗ | ಪಿ.ಯು.ಸಿ / ತತ್ಸಮಾನ |
| | | **ಸರ್ಟಿಫಿಕೇಟ್ ಕೋರ್ಸ್‌ಗಳು** | |
| 9 | ಸರ್ಟಿಫಿಕೇಟ್ ಕೋರ್ಸ್‌ಗಳು | ➢ ಜನಪದ ಗೀತ ಸಂಪ್ರದಾಯ, ಜನಪದ ನೃತ್ಯ, ದೊಡ್ಡಾಟ, ಜನಪದ, ಪ್ರವಾಸೋದ್ಯಮ, ತೊಗಲು ಗೊಂಬೆಯಾಟ, ಕಸೂತಿ ಕಲೆ | ಎಸ್.ಎಸ್.ಎಲ್.ಸಿ |

* – ಪ್ರವೇಶ ಪರೀಕ್ಷೆ ದಿನಾಂಕವನ್ನು ಮುಂದೆ ತಿಳಿಸಲಾಗುವುದು.

ಆ) ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರಗಳು:

| (1) ಮಲೆಮಹದೇಶ್ವರ ಬೆಟ್ಟ ಪ್ರಾದೇಶಿಕ ಅಧ್ಯಯನ ಕೇಂದ್ರ | (2) ಬೀದರ್ ಪ್ರಾದೇಶಿಕ ಅಧ್ಯಯನ ಕೇಂದ್ರ |
|---|---|
| ➢ ಬೀಸು ಕಂಸಾಳೆ, ಕಸೂತಿ ಕಲೆ, ಡೊಳ್ಳು ಕುಣಿತ | ➢ ಜನಪದ ಗೀತ, ಜನಪದ ಕುಣಿತ, ಬಿದರಿ ಕಲೆ, ಸಮರ ಕಲೆ, ಪಾರಂಪರಿಕ ಹೈನುಗಾರಿಕೆ ಡಿಪ್ಲೊಮಾ, ಕಸೂತಿ ಕಲೆ |
| **(3) ಮಂಡ್ಯ ಪ್ರಾದೇಶಿಕ ಅಧ್ಯಯನ ಕೇಂದ್ರ** | **(4) ಜೋಯಿಡಾ ಪ್ರಾದೇಶಿಕ ಅಧ್ಯಯನ ಕೇಂದ್ರ** |
| ➢ ಬೀಸು ಕಂಸಾಳೆ, ಡೊಳ್ಳು ಕುಣಿತ, | ➢ ಜನಪದ ಗೀತ ಸಂಪ್ರದಾಯ, ಜನಪದ ನೃತ್ಯ |

**ಸೂಚನೆಗಳು:**

1. ವಿದ್ಯಾರ್ಹತೆ, ಅರ್ಜಿ ನಮೂನೆ, ಪ್ರವೇಶ ಶುಲ್ಕ ಹಾಗೂ ಇತರ ಮಾಹಿತಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ **WWW.janapadauniversity.ac.in** ನ್ನು ಸಂಪರ್ಕಿಸಬಹುದು.
2. ಅಂತಿಮ ವರ್ಷದ ಪದವಿ ಪರೀಕ್ಷೆಗೆ ಹಾಜರಾಗಿ ಫಲಿತಾಂಶ ನಿರೀಕ್ಷಿಸುತ್ತಿರುವ ವಿದ್ಯಾರ್ಥಿಗಳು ಸಹ ಅರ್ಜಿಗಳನ್ನು ಸಲ್ಲಿಸಬಹುದು. ಆದರೆ, ಫಲಿತಾಂಶ ಪ್ರಕಟಣೆಯ ಅನಂತರ ಅಂಕಪಟ್ಟಿಗಳನ್ನು ಕೂಡಲೇ ಇಂಟರ್‌ನೆಟ್ ಮೂಲಕ ಪಡೆದು ಸಂಬಂಧಿಸಿದ ವಿಭಾಗಕ್ಕೆ ಸಲ್ಲಿಸುವುದು.
3. ಅನಿವಾಸಿ ಭಾರತೀಯ ಮತ್ತು ವಿದೇಶಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ನಿಯಮಗಳನುಸಾರ ಮುಕ್ತ ಪ್ರವೇಶವನ್ನು ಕಲ್ಪಿಸಲಾಗುವುದು.
4. ಪ್ರವೇಶಾತಿ ಅರ್ಜಿ ಶುಲ್ಕ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ರೂ. 300/-( ರೂ. ಮೂರು ನೂರು ಮಾತ್ರ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ – 1 ರ ವಿದ್ಯಾರ್ಥಿಗಳಿಗೆ ರೂ. 150/-(ರೂ. ಒಂದು ನೂರಾ ಐವತ್ತು ರೂ. ಗಳು ಮಾತ್ರ) ಗಳಾಗಿರುತ್ತವೆ. ಅಂತಹ ವಿದ್ಯಾರ್ಥಿಗಳು ಜಾತಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.
5. ಪ್ರವೇಶಾತಿ ಅರ್ಜಿಯನ್ನು ದಿನಾಂಕ: **28.09.2020 ರಿಂದ ಪಡೆಯಬಹುದಾಗಿದೆ.**
6. ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡ ಅರ್ಜಿಗಳಿಗೆ ರೂ. 300/- (ರೂ. ಮೂರು ನೂರು ಮಾತ್ರ) (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ – 1 ರ ವಿದ್ಯಾರ್ಥಿಗಳಿಗೆ ರೂ. 150/- ( ರೂ. ಒಂದು ನೂರಾ ಐವತ್ತು ಮಾತ್ರ) ಮೊತ್ತದ ಡಿ.ಡಿ. ಯನ್ನು ಲಗತ್ತಿಸಿ ಸಲ್ಲಿಸತಕ್ಕದ್ದು.
7. ಪ್ರತಿ ಕೋರ್ಸಿಗೆ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಸಲ್ಲಿಸಿದ ಅರ್ಜಿಯನ್ನು ಬೇರೆ ಕೋರ್ಸಿಗೆ ವರ್ಗಾವಣೆ ಮಾಡಲಾಗುವುದಿಲ್ಲ.
8. ಭರ್ತಿ ಮಾಡಿದ ಅರ್ಜಿಗಳನ್ನು **ಕುಲಸಚಿವರು (ಮೌಲ್ಯಮಾಪನ)** ಇವರಿಗೆ ಸಲ್ಲಿಸಬೇಕು. **ದಿನಾಂಕ: 20.10.2020 ರೊಳಗಾಗಿ** ಆಯ್ಕೆಯಾದ ಅಭ್ಯರ್ಥಿಗಳು ಪ್ರವೇಶಾತಿಯನ್ನು ಪಡೆಯತಕ್ಕದ್ದು.
9. ಯಾವುದೇ ಕೋರ್ಸ್‌ಗಳಿಗೆ ಅಗತ್ಯ ಸಂಖ್ಯೆಯ ಅರ್ಜಿಗಳು ಸ್ವೀಕೃತವಾಗದಿದ್ದಲ್ಲಿ ಅಂತಹ ಕೋರ್ಸ್‌ಗಳನ್ನು ನಡೆಸುವುದರ ಬಗ್ಗೆ ವಿಶ್ವವಿದ್ಯಾಲಯದ ನಿರ್ಣಯವೇ ಅಂತಿಮ.
10. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಲೆಮಹದೇಶ್ವರ ಬೆಟ್ಟ, ಜೊಯಿಡಾ, ಮಂಡ್ಯ ಹಾಗೂ ಬೀದರ್‌ನ ಪ್ರಾದೇಶಿಕ ಜಾನಪದ ಅಧ್ಯಯನ ಕೇಂದ್ರಗಳಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರವೇಶ ಬಯಸುವವರು ಸಂಬಂಧಿಸಿದ ಅಧ್ಯಯನ ಕೇಂದ್ರಗಳಿಂದಲೂ ನಿಗದಿತ ಶುಲ್ಕವನ್ನು **ಹಣಕಾಸು ಅಧಿಕಾರಿಗಳು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ** ಹೆಸರಿನಲ್ಲಿ ಪಾವತಿಸಿ ಅರ್ಜಿ ಪಡೆಯಬಹುದು.
11. ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾಲಯದ ಕಛೇರಿಗೆ ಭೇಟಿ ನೀಡಿ ವಿಚಾರಿಸಬಹುದು ಅಥವಾ ಕಛೇರಿ **ದೂರವಾಣಿ ಸಂಖ್ಯೆ: 0836-2255180 / ಮೊ. 8217241851 / 7795051471**
12. ಮಲೆಮಹದೇಶ್ವರ ಬೆಟ್ಟ ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರದ ದೂರವಾಣಿ ಸಂಖ್ಯೆ: **08225-272267 / 9741517993 / 9902619470**
13. ಬೀದರ್ ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರದ ದೂರವಾಣಿ ಸಂಖ್ಯೆ: **9448585344 / 8792220143**
14. ಜೊಯಿಡಾ ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರದ ದೂರವಾಣಿ ಸಂಖ್ಯೆ: **8050449841**
15. ಮಂಡ್ಯ ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರದ ದೂರವಾಣಿ ಸಂಖ್ಯೆ: **08232-229333 / 9448194456** ರ ಮೂಲಕ ಸಂಪರ್ಕಿಸಬಹುದು.

**ಆದೇಶದ ಮೇರೆಗೆ,**

**ಕುಲಸಚಿವರು**